ಗಾತ್ರದ ವಾಹಕಗಳಾಗಿದ್ದು, ಈಗ ಹೊರೆ ಹೆಚ್ಚಾಗಿರುವುದರಿಂದಲೂ ಓಲ್ಟೇಜ್ ಸಮಸ್ಯೆ ಉಂಟಾಗಿರುತ್ತದೆ. ಈ ಸಮಸ್ಯೆಯು ಸುಮಾರು ಎರಡು ವರ್ಷಗಳಿಂದಿದೆ.

ಆ) ಆ ಮತ್ತು ಈ

ಈ ಸಮಸ್ಯೆಯ ಪರಿಹಾರಕ್ಕಾಗಿ ತೀರ್ಥಹಳ್ಳಿಯಲ್ಲಿರುವ 110 : 11 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸಾಮರ್ಥ್ಯದ ಬಲವರ್ಧನೆಯ ಕಾಮಗಾರಿಯ ಜೊತೆಗೆ ಈ ತಾಲ್ಲೂಕಿನ ಕಮ್ಮರಡಿಯಲ್ಲಿ 100:11 ಕೆ.ವಿ. 1x10 ಎಂ.ವಿ.ಎ. ಸಾಮರ್ಥ್ಯದ ನೂತನ ವಿದ್ಯುತ್ ಉಪ ಕೇಂದ್ರವನ್ನು ಮತ್ತು ಕೋಣಂದೂರಿನಲ್ಲಿ 110:11 ಕೆ.ವಿ. 1x5 ಎಂ.ವಿ.ಎ. ಸಾಮರ್ಥ್ಯದ ನೂತನ ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿತ್ತು. ನಿಗಮದ ತಾಂತ್ರಿಕ ಸಮಿತಿಯೂ ಸಹ ಈ ಕಾಮಗಾರಿಯ ಪ್ರಸ್ತಾವನೆಗೆ ಅಕ್ಟೋಬರ್ 2001ರಲ್ಲಿ ತನ್ನ ಅನುಮೋದನೆ ನೀಡಿತ್ತು. ಆದರೆ ಕಮ್ಮರಡಿ ಮತ್ತು ಕೋಣಂದೂರಿನಲ್ಲಿ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಲು ಇವೆರಡೂ ಸ್ಥಳಗಳಿಗೆ 110 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಿಸಲು, ಮುಖ್ಯ ಅರಣ್ಯ ಪ್ರದೇಶವನ್ನು ತೆರವುಗೊಳಿಸಬೇಕಾಗುವುದರಿಂದ 110 ಕೆ.ವಿ.ಗೆ ಬದಲಾಗಿ 33 ಕೆ.ವಿ. ವಿದ್ಯುತ್ ಮಾರ್ಗವನ್ನು ನಿರ್ಮಾಣ ಮಾಡಿ, 33:11 ಕೆ.ವಿ.ಯ ಉಪ ಕೇಂದ್ರಗಳನ್ನು ಸ್ಥಾಪಿಸುವುದರ ಬಗ್ಗೆ ಆಲೋಚಿಸಲಾಗಿದೆ. ಇದಕ್ಕಾಗಿ ವಿವರವಾಗಿ ಅಧ್ಯಯನ ಮಾಡಿ ವರದಿಯನ್ನು ನೀಡಲು ಸಂಬಂಧಿಸಿದ ಅಧಿಕಾರಿಗಳನ್ನು ಕೋರಲಾಗಿದೆ. ಸದರಿಯವರಿಂದ ತಾಂತ್ರಿಕ ವರದಿಯು ಸ್ವೀಕೃತವಾದ ನಂತರ ಪ್ರಸ್ತಾವನೆಯನ್ನು ನಿಗಮದ ತಾಂತ್ರಿಕ ಸಮಿತಿಯ ಮುಂದೆ ಸೂಕ್ತವಾದ ತೀರ್ಮಾನಕ್ಕಾಗಿ ಮಂಡಿಸಬೇಕಾಗಿರುತ್ತದೆ.

ಈ ಕಾಮಗಾರಿಯ ಬಗ್ಗೆ ಇನ್ನು ಪ್ರಾಥಮಿಕ ಹಂತದಲ್ಲಿ ಅಧ್ಯಯನ ನಡೆಯುತ್ತಿರುವುದರಿಂದ, ಕೆಲಸ ಪೂರ್ಣಗೊಳಿಸುವ ಬಗ್ಗೆ ಕಾಲ ನಿಗದಿ ಪಡಿಸಿರುವುದಿಲ್ಲ.

ಇ) ತಾಲ್ಲೂಕಿನಲ್ಲಿ ವಿಫಲ ಹೊಂದಿರುವ ಎಲ್ಲಾ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲಾಗಿದೆ. ಬದಲಾವಣೆಗಾಗಿ ಯಾವುದೇ ಟ್ರಾನ್ಸ್‌ಫಾರ್ಮರ್‌ಗಳು ಬಾಕಿ ಇರುವುದಿಲ್ಲ.

ಶಿವಮೊಗ್ಗ ಜಿಲ್ಲಾ ಹಾಗೂ ತಾಲ್ಲೂಕು ಖಜಾನೆಗಳಲ್ಲಿ ಬಿಲ್‌ಗಳ ಮರುಪಾವತಿಯಲ್ಲಿ ವಿಳಂಬ

1543(1868) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಶಿವಮೊಗ್ಗ ಜಿಲ್ಲಾ ಖಜಾನೆ ಮತ್ತು ವಿವಿಧ ತಾಲ್ಲೂಕು ಖಜಾನೆಗಳಲ್ಲಿ ಪಾವತಿಯಾಗದೇ ಉಳಿದಿರುವ ಬಿಲ್‌ಗಳು ಎಷ್ಟು; ಇದರ ಮೊತ್ತವೇನು? ಎಷ್ಟು ಸಮಯದಿಂದ ಇವೆ;

2) ಸದರಿ ಜಿಲ್ಲಾ ಖಜಾನೆಯಲ್ಲಿ ಒಂದು ಲಕ್ಷಕ್ಕಿಂತ ಅಧಿಕ ಮೊತ್ತದ ಬಿಲ್‌ಗಳನ್ನು ನಗದೀಕರಿಸದಂತೆ, ಸರ್ಕಾರ ನಿರ್ದೇಶನ ನೀಡಿದೆಯೇ; ಹಾಗಿದ್ದಲ್ಲಿ, ಕಾರಣವೇನು?

3) ಈ ಖಜಾನೆಯಲ್ಲಿ ಪಾವತಿಗೆ ಬಾಕಿ ಇರುವ ವರಾಹಿ ಮತ್ತು ಚಕ್ರಾ ಸಂತ್ರಸ್ಥರ ಬಿಲ್‌ಗಳು ಎಷ್ಟಿವೆ; ಅವುಗಳ ಮೊತ್ತವೆಷ್ಟು; ಎಷ್ಟು ದಿನದಿಂದ ಪಾವತಿಸದೆ ಬಾಕಿ ಇವೆ; ಯಾವ ಕಾರಣಕ್ಕಾಗಿ ವಿಳಂಬವಾಗಿದೆ; ಯಾವಾಗ ಪಾವತಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

1) 5 ಒಟ್ಟು ರೂ. 189.28 ಲಕ್ಷ ವಿವಧ ಅವಧಿಗೆ ದಿನಾಂಕ 7-6-2002ರಿಂದ ಬಾಕಿಯಿದೆ.

2) ರಾಜ್ಯದ ಆರ್ಥೋಪಾಯ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಆಗಿಂದಾಗ್ಗೆ ಸೂಕ್ತ ಸೂಚನೆ ನೀಡಲಾಗುತ್ತದೆ.

3) 1

ಅದರ ಮೊತ್ತ 6,78,507-00 ಜುಲೈ 1 ರಿಂದ ಬಾಕಿಯಿದೆ.

ರಾಜ್ಯದ ಆರ್ಥೋಪಾಯ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಬಿಲ್ಲುಗಳನ್ನು ನಗದೀಕರಿಸಲಾಗುತ್ತಿದೆ.

ಸರ್ಕಾರಿ ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು

1544 (1869) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ, ವಿವಿಧ ಇಲಾಖೆಯಲ್ಲಿ ಖಾಲಿ ಇರುವ, ದ್ವಿತೀಯ ದರ್ಜೆ ಗುಮಾಸ್ತ, ಅಥವಾ ಸಹಾಯಕರ ಹುದ್ದೆಗಳ ಸಂಖ್ಯೆ ಎಷ್ಟು; ಇಲಾಖಾವಾರು ವಿವರ ನೀಡುವುದು;

ಆ) ಸರ್ಕಾರಿ ನೌಕರರು ಉದ್ಯೋಗದಲ್ಲಿ ಇದ್ದಾಗಲೇ ತೀರಿಕೊಂಡರೆ ಅನುಕಂಪದ ಆಧಾರದಲ್ಲಿ ಇವರ ಕುಟುಂಬದವರಿಗೆ ಉದ್ಯೋಗ ನೀಡುವ ನಿಯಮ ಇದೆಯೇ;

ಇ) ಹಾಗಿದ್ದಲ್ಲಿ, ಈ ನಿಯಮಾವಳಿಗಿಂತ ದ್ವಿತೀಯ ದರ್ಜೆ ನೌಕರಿಗಾಗಿ ಅಪೇಕ್ಷಿಸಿ ಬಂದ ಅರ್ಜಿಗಳನ್ನು ಕೆಲಸ ಕೊಡಲು ಬಾಕಿ ಇರುವ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು;

ಈ) ವಿವಿಧ ಇಲಾಖೆಯಲ್ಲಿ ಕೆಲಸ ಖಾಲಿ ಇದ್ಯಾಗ್ಯೂ ಈ ರೀತಿ ನೌಕರಿ ಎಷ್ಟು ದಿನದಿಂದ ಬಾಕಿ ಇದೆ ಕೊಡಲು ವಿಳಂಬಕ್ಕೆ ಕಾರಣವೇನು;

ಈ ಬಗ್ಗೆ ತುರ್ತು ಕ್ರಮ ಸರ್ಕಾರ ಕೈಗೊಳ್ಳುವುದೇ;

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) 92.

ವಿಭಾಗಾವಾರು ಮಾಹಿತಿ ಈ ಕೆಳಕಂಡಂತಿದೆ

ಬೆಂಗಳೂರು	-	ಇಲ್ಲ
ಮೈಸೂರು	-	ಇಲ್ಲ
ಗುಲ್ಬರ್ಗಾ	-	30
ಬೆಳಗಾವಿ	-	62

ಇಲಾಖಾವಾರು ಮಾಹಿತಿ ಕೂಡಲೇ ಲಭ್ಯವಿಲ್ಲ.

ಆ) ಇದೆ.

ಇ) 891

2000-01 ದಿಂದ

ಈ) ಮೃತ ಸರ್ಕಾರಿ ನೌಕರನ ಮಾತೃ ಇಲಾಖೆಯಲ್ಲಿ ಖಾಲಿ ಸ್ಥಾನ ಲಭ್ಯವಿಲ್ಲದೇ ಇದ್ದಲ್ಲಿ, ಅವನ ಅವಲಂಬಿತರ ಅರ್ಜಿಯನ್ನು ಸಂಬಂಧಿಸಿದ ವಿಭಾಗಾಧಿಕಾರಿಗಳಿಗೆ ವರ್ಗಾಯಿಸಿ, ಖಾಲಿ ಸ್ಥಾನ ಲಭ್ಯವಿರುವ ಬೇರೆ ಇಲಾಖೆಯಲ್ಲಿ ನೇಮಕಾತಿ ನೀಡಲು ನಿಯಮಗಳಲ್ಲಿ ಅವಕಾಶವನ್ನು